Annual Report of NSS - 2014-15.

# ರಾಷ್ಟ್ರೀಯ ಸೇವಾ ಯೋಜನಾ
# ರಾ.ಸೇ.ಯೋ ನಿತ್ಯ ಚಟುವಟಿಕೆಗಳ ವರದಿ

ದಿನಾಂಕ:8.7.2014ರಂದು ವನಮಹೋತ್ಸವದ ಆಚರಣೆಯ ಮೂಲಕ ಆರಂಭವಾದ 2014-15ನೇ ಸಾಲಿನ ಚಟುವಟಿಕೆಗಳು ಶ್ರಮದಾನ, ಸೇವೆ, ಜಾಗೃತಿ ಎಂಬ ಮೂರು ಹಂತಗಳಲ್ಲಿ ನಡೆದವು.

ದಿನಾಂಕ:19.07.2014ರಂದು ಕಾಲೇಜಿನ ಅಧ್ಯಾಪಕರು, ಸಿಬ್ಬಂದಿಯವರು ಹಾಗೂ ವಿದ್ಯಾರ್ಥಿಗಳಿಂದ 8,000.00 ರೂಗಳನ್ನು ಸಂಗ್ರಹಿಸಿ ಈ ವರ್ಷಾರಂಭದಲ್ಲಿ ಜಮ್ಮು-ಕಾಶ್ಮೀರದಲ್ಲಿ ಭೀಕರ ಪ್ರವಾಹಕ್ಕೆ ತುತ್ತಾದ ಸಂತ್ರಸ್ತ ಜನರಿಗೆ ತಲುಪಿಸಲು ಪ್ರಧಾನಮಂತ್ರಿಯವರ ಪರಿಹಾರನಿಧಿಗೆ ಕಳುಹಿಸಿಕೊಡಲಾಯಿತು. ದಿನಾಂಕ 24.09.2014ರಂದು ಕಾಲೇಜಿನಲ್ಲಿ ರಕ್ತನಿಧಿ ಕೇಂದ್ರ, ಮೆಗ್ಗಾನ್ ಬೋಧನಾ ಆಸ್ಪತ್ರೆ, ಶಿವಮೊಗ್ಗರವರ ನೆರವಿನೊಂದಿಗೆ ರಕ್ತಗುಂಪು ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ನಡೆಸಿದವು. ಎನ್.ಎಸ್.ಎಸ್ ಅಧಿಕಾರಿಗಳಾದ ಡಾ.ಬಿಗಣಪತಿ, ಡಾ.ಆರ್ ಕುಮಾರಸ್ವಾಮಿ ಹಾಗೂ ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಒಟ್ಟು 42 ಬಾಟಲು ರಕ್ತ ಸಂಗ್ರಹ ಮಾಡಲಾಯಿತು. ಸ್ವಚ್ಛಭಾರತ ಆಂದೋಲನದ ಹಿನ್ನೆಲೆಯಲ್ಲಿ ಗಾಂಧೀಜಯಂತಿಯಂದು ಕಾಲೇಜಿನ ಅಧ್ಯಾಪಕರು ಮತ್ತು ಸಿಬ್ಬಂದಿಯವರೊಂದಿಗೆ ಎನ್.ಎಸ್.ಎಸ್ ಅಧಿಕಾರಿಗಳು ಮತ್ತು ಸ್ವಯಂಸೇವಕರು ಸೇರಿ ಕಾಲೇಜಿನ ಎಲ್ಲಾ ಕೊಠಡಿಗಳನ್ನು ನೀರಿನಲ್ಲಿ ತೊಳೆದು ಸ್ವಚ್ಛಗೊಳಿಸಲಾಯಿತು. ಈ ಸಾಲಿನಲ್ಲಿ ನಮ್ಮ ಕಾಲೇಜಿನ ಎನ್.ಎಸ್.ಎಸ್ ಸ್ವಯಂಸೇವಕ, ಅಚಿತಿಮ ಬಿ.ಎಸ್‌ಸಿ ವಿದ್ಯಾರ್ಥಿ ಚೇತನ್ ಜಿ. ಇವರನ್ನು ಪ್ರಿಆರ್‌ಡಿ ಶಿಬಿರಕ್ಕೆ ಕಳುಹಿಸಲಾಗಿತ್ತು. ಇವರು ಆಯ್ಕೆಯಾಗಿ ದಿನಾಂಕ 26.01.2015ರ ದೆಹಲಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಂಡಿದ್ದರು ಹಾಗೂ ಅನೇಕ ಸ್ವಯಂಸೇವಕರು ಜಿಲ್ಲಾ ಮಟ್ಟದ ಮತ್ತು ವಿಶ್ವವಿದ್ಯಾನಿಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನಾ ಶಿಬಿರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ದಿನಾಂಕ:07.03.2015ರಂದು ತೀರ್ಥಹಳ್ಳಿಯಲ್ಲಿ ತಾಲ್ಲೂಕು ಆಡಳಿತ ಮತ್ತು ವಿವಿಧ ಸಂಘಟನೆಗಳು ತಂಬಾಕು ಸೇವನೆಯ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸುವ ಜಾಥಾ ಮತ್ತು ಆರೋಗ್ಯ ತಪಾಸಣೆ ಹಮ್ಮಿಕೊಂಡಿದ್ದರು. ಇದರಲ್ಲಿ ನಮ್ಮ ಸ್ವಯಂ ಸೇವಕರು ಪಾಲ್ಗೊಂಡು ತಂಬಾಕು ಮುಕ್ತ ತೀರ್ಥಹಳ್ಳಿ ಎಂಬ ಘೋಷಣೇಯಡಿ ಜಾಥಾ ನಡೆಸಿದವು.

ಈ ಸಾಲಿನಲ್ಲಿ ಕಾಲೇಜಿನ ಆವರಣ, ಸುತ್ತಮುತ್ತ ಸ್ವಚ್ಛತೆ, ಕಾಲೇಜಿನ ಮುಂಭಾಗದಲ್ಲಿರುವ ಮುಖ್ಯರಸ್ತೆಯ ನಿರ್ವಹಣೆ ಹಾಗೂ ಯಡೇಹರ್ಳಳಿ ಕೆರೆಯ ಸ್ವಚ್ಛತೆ ಮುಖ್ಯವಾದ ಶ್ರಮದಾನವಾಗಿದೆ ಮತ್ತು ಹಳ್ಳಿಯಾದ ಯಡೇಹಳ್ಳಿ ಕೆರೆಯ ಸುತ್ತಮುತ್ತಲಿದ್ದ ಕಸ, ಪ್ಲಾಸ್ಟಿಕ್, ಹಳು ತೆಗೆಯುವ ಕೆಲಸ ಮಾಡಿದವು. ಇಡೀ ಗ್ರಾಮದಲ್ಲಿ ಇನ್ನೂ ಅನೇಕ ದಿನವಾರ ವರ್ಷ ಸ್ವಯಂಸೇವಕರು ಜಾಗೃತಿ ಮೂಡಿಸಲು ತೆಗೆದುಕೊಳ್ಳಿವಷ್ಟು ಅಗತ್ಯಕಾರ್ಯವನ್ನು ಹೊಂದಿದೆ. ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಪ್ರದೇಶದ ಗಮನ ನಮ್ಮ ಮುಂದಿನ ಸ್ವಯಂಸೇವಕರ ಗುರಿಯಾಗಬೇಕಾದ್ದಿದೆ. ಎನ್.ಎಸ್.ಎಸ್ ಸಲಹಾ ಸಮಿತಿಯ ಸದಸ್ಯರೂ ಈ ಕುರಿತು ಆಸಕ್ತರಿದ್ದು ಮುಂದಿನ ವರ್ಷಗಳಲ್ಲಿ ಸ್ವಯಂ ಸೇವಕರನ್ನು ಈ ನಿಟ್ಟಿನಲ್ಲಿ ತರಬೇತು ಮಾಡುವುದು ನಮ್ಮ ಗುರಿಯಾಗಿದೆ.

❄

Scanned by CamScanner